# 2025-26 ನೇ ಸಾಲಿನ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ-1

**ತರಗತಿ : 8th  ವಿಷಯ: ಗಣಿತ  ಅಂಕಗಳು : 40  ಅವಧಿ : 1ಗಂಟೆ 30 ನಿಮಿಷ**

## I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನುಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ. $1 \times 4 = 4$


1. ಭಾಗಲಬ್ಧ ಸಂಖ್ಯೆಗಳ ಗುಣಾಕಾರದ ಅನನ್ಯತಾಂಶವು
   A) 1  B) 0  C ) -1  D ) ½
2. $3m + 4 = 10$ ಈ ಸಮೀಕರಣದಲ್ಲಿ ಚರಾಕ್ಷರವು
   A) $3$  B) $4$  C) $m$  D) $10$
3. ಯಾವುದೇ ಒಂದು ಬಹುಭುಜದ ಎಲ್ಲಾ ಹೊರಕೋನಗಳ ಮೊತ್ತವು
   A) $180^0$  B) $360^0$  C) $240^0$  D) $90^0$
4. ಚಿಹ್ನೆಗಳನ್ನು ಬಳಸಿಕೊಂ ಡು ದತ್ತಾಂಶದ ಚಿತ್ರಣವನ್ನು ನೀಡುವ ನಕ್ಷೆಯು
   A) ಸ್ತಂಭ ನಕ್ಷೆ  B) ಚಿತ್ರ ನಕ್ಷೆ  C ) ಪೈ ನಕ್ಷೆ  D) ಜೋಡಿ ಸ್ತಂಭ ನಕ್ಷೆ

## II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. $1 \times 4 = 4$

5. ಅತ್ಯಂತ ಚಿಕ್ಕದಾದ ಪೂರ್ಣ ವರ್ಗ ಸಂಖ್ಯೆ ಯಾವುದು?
6. 1 ಕ್ಕಿಂತ ದೊಡ್ಡದಾದ , ಅತ್ಯಂತ ಪೂರ್ಣ ಘನ ಸಂಖ್ಯೆ ಯಾವುದು?
7. ಭಾಗಲಬ್ಧ ಸಂಖ್ಯೆಗಳ ಸಂಕಲನದ ಅನನ್ಯತಾಂಶವನ್ನು ಬರೆಯಿರಿ.
8. ವೃತ್ತ ನಕ್ಷೆ (ಪೈ ನಕ್ಷೆ) ಎಂದರೇನು?


## III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. $2 \times 6 = 12$

9. ಚಿಕ್ಕ ಸಂಖ್ಯೆ 8 ನ್ನು ಹೊಂದಿರುವ ಪೈಥಾಗೋರಿಯನ್ ತ್ರಿವಳಿಯನ್ನು ಬರೆಯಿರಿ.
10. 512 ರ ಘನಮೂಲವನ್ನು ಅವಿಭಾಜ್ಯ ಅಪವರ್ತನ ವಿಧಾನದಿಂದ ಕಂಡು ಹಿಡಿಯಿರಿ.
11. ಲೆಕ್ಕದ ಎಡಭಾಗ ಮತ್ತು ಬಲಭಾಗಗಳನ್ನು ಪ್ರತ್ಯೇಕವಾಗಿ ಬಿಡಿಸಿ , ಭಾಗಲಬ್ಧ ಸಂಖ್ಯೆಗಳ ವಿತರಣಾ ಗುಣವನ್ನು ಪರೀಕ್ಷಿಸಿ. $\frac{6}{5}\left[\frac{5}{7}+\frac{1}{2}\right] = \frac{6}{5}\times\frac{5}{7}+\frac{6}{5}\times\frac{1}{2}$
12. ಬಿಡಿಸಿ : $6m - 5 = 4m + 11$
13. ಪತಂಗದ ಯಾವುದಾದರೂ 2 ಗುಣಲಕ್ಷಣಗಳನ್ನು ಪಟ್ಟಿಮಾಡಿ.
14. ಕೆಳಗೆ ಕೊಟ್ಟಿರುವ ಚಿತ್ರ ನಕ್ಷೆಯನ್ನು ಗಮನಿಸಿ , ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.
   (i) ಜುಲೈ ತಿಂಗಳಿನಲ್ಲಿ ತಯಾರಾದ ಕಾರುಗಳ ಸಂಖ್ಯೆ ಎಷ್ಟು ?
   (ii) ಯಾವ ತಿಂಗಳಿನಲ್ಲಿ ಹೆಚ್ಚು ಕಾರುಗಳು ತಯಾರಾಗಿವೆ ?




## IV . ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. $3 \times 4 = 12$

15. ಬಿಡಿಸಿ : $\frac{3t-2}{4} - \frac{2t+3}{3} = \frac{2}{3} - t$
16. ಕೊಟ್ಟಿರುವ ಚಿತ್ರದಲ್ಲಿ $x$ ನ ಬೆಲೆ ಕಂಡು ಹಿಡಿಯಿರಿ.




17. ಪುನರಾವರ್ತಿತ ವ್ಯವಕಲನದ ಮೂಲಕ 121 ವರ್ಗಮೂಲವನ್ನು ಕಂಡು ಹಿಡಿಯಿರಿ.
18. ಒಂದು ವಸತಿ ಗೃಹದಲ್ಲಿ ವಿಭಿನ್ನ ಭಾಷೆಗಳನ್ನು ಮಾತನಾಡುವ ವಿದ್ಯಾರ್ಥಿಗಳ ಸಂಖ್ಯೆಯು ಈ ಕೆಳಗಿನಂತಿದೆ. ಈ ಮಾಹಿತಿಯನ್ನು ಪೈ ನಕ್ಷೆಯಲ್ಲಿ ಪ್ರತಿನಿಧಿಸಿ.

| ಭಾಷೆ | ಹಿಂದಿ | ಇಂಗ್ಲೀಷ್ | ಮರಾಠಿ | ತಮಿಳು | ಬೆಂಗಾಳಿ | ಒಟ್ಟು |
|---|---|---|---|---|---|---|
| ವಿ.ಗಳ ಸಂಖ್ಯೆ | 40 | 12 | 9 | 7 | 4 | 72 |

## V. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. $4 \times 2 = 8$

19. ಒಂದು ತೋಟದಲ್ಲಿ 2025 ಸಸಿಗಳನ್ನು ನೆಡಬೇಕಾಗಿದೆ. ಪ್ರತಿ ಸಾಲಿನಲ್ಲಿರುವ ಸಂಖ್ಯೆಯು ಸಾಲುಗಳ ಸಂಖ್ಯೆಗೆ ಸಮವಾಗಿದೆ. ಹಾಗಾದರೆ ಪ್ರತಿ ಸಾಲಿನಲ್ಲಿರುವ ಸಸಿಗಳನ್ನು ಕಂಡುಹಿಡಿಯಿರಿ.ಇನ್ನು 5 ಸಾಲುಗಳನ್ನು ಹೆಚ್ಚಿಸಲು ಬಯಸಿದರೆ ಚೌಕಾಕಾರದಲ್ಲಿ ನೆಡಲು ಬೇಕಾಗುವ ಒಟ್ಟು ಸಸಿಗಳ ಸಂಖ್ಯೆಯನ್ನು ಕಂಡು ಹಿಡಿಯಿರಿ.
20. ಸುಲಭ ರೂಪಕ್ಕೆ ತನ್ನಿ : (i) $\frac{32}{5}+\frac{23}{11}\times\frac{22}{15}$ (ii) $\frac{3}{7}+\frac{28}{15}\div\frac{14}{5}$ (iii) $\frac{2}{7}\times[\frac{7}{16}-\frac{21}{4}]$ (iv) $\frac{3}{4}\times[\frac{8}{9}-40]$

******************************************ಶುಭವಾಗಲಿ*************************************************